<u>ಒ.ಎಸ್.ನಂಬ್ರಃ</u> **43/2021** **<u>ಪಿ.ಡಬ್ಲ್ಯೂ: 1</u>**

ದಿನಾಂಕಃ 15-03-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟಿ ಸವಾಲುಃ **1** ರಿಂದ **3** ನೇ ಪ್ರತಿವಾದಿ ಪರ ವಕೀಲರಾದ ಮಾನ್ಯ ಎ ಜಿ ಪಿ ರವರಿಂದ</u>

ಸರ್ವೆ ನಂ.220/11 ನಮಗೆ ಸೇರಿದ ಜಾಗ ಆಗಿರುತ್ತದೆ. ಸದರಿ ಸ್ವತ್ತು ನನಗೆ ಪಾಲು ಪಟ್ಟಿಯ ಮೂಲಕ ಬಂದಿರುತ್ತದೆ. ಸದರಿ ಸ್ವತ್ತಿಗೆ ಸಂಬಂಧಿಸಿದ ಮೂಲ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದಿರಾ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ಕೊಟ್ಟಿರುವುದಾಗಿ ನುಡಿದಿರುತ್ತಾರೆ. ಸರ್ವೆ ನಂ.220/18 ನಮಗೆ ಸೇರಿದ ಜಾಗ ಆಗಿದ್ದು, ನನ್ನ ಹೆಸನರಿಲ್ಲಿರುತ್ತದೆ. ಸದರಿ ಸ್ವತ್ತು ನನ್ನ ಹೆಸರಿನಲ್ಲಿದೆ ಎಂದು ತೋರಿಸಲು ದಾಖಲೆಯನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ, ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಈ 2 ಸರ್ವೆ ನಂಬರಗಳಿಗೆ ಸಂಬಂಧಿಸಿದಂತೆ ಪಹಣಿಗಳು ಮತ್ತು ಕಂದಾಯ ರಸೀದಿಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನನಗೆ ವಕೀಲರು ಓದಿ ತಿಳಿಸಿರುತ್ತಾರೆ.

ಸರ್ವೆ ನಂ.220/11 ಮತ್ತು 220/18 ರ ಚೆಕ್ಕುಬಂದಿಗಳು ಮತ್ತು ವಿಸ್ತೀರ್ಣ ಗೊತ್ತಿರುತ್ತದೆ. ಸರ್ವೆ ನಂ.220/11 ನಾಲ್ಕುವರೆ ಸೆಂಟ್ಸ ಆಗಿದ್ದು, 220/18 ಐದು ಸೆಂಟ್ಸ ಆಗಿರುತ್ತದೆ. 2 ಸರ್ವೆ ನಂಬರಗಳಿಗೂ ಒಂದೇ ಚೆಕ್ಕುಬಂದಿ ಬರುತ್ತದೆ. ಉತ್ತರಕ್ಕೆ - ಶಿವಮೊಗ್ಗ - ಕುಂದಾಪುರ ಮುಖ್ಯರಸ್ತೆ, ಸದರಿ ರಸ್ತೆಯ ಸರ್ವೆ ನಂ.218 ಆಗಿರುತ್ತದೆ. ಸದರಿ ಜಾಗ ಸರ್ಕಾರಿ ಜಾಗ ಎಂದರೆ ಸರಿ. ದಕ್ಷಿಣಕ್ಕೆ - ನನ್ನ ತಾಯಿ ನೀಲಮ್ಮ ಶೆಡ್ತಿರವರ ಹೆಸರಿನಲ್ಲಿರುವ ಜಾಗ ಇದೆ, ಅದರ ಸರ್ವೆ ನಂ.220 ಆಗಿದ್ದು ಸಬ್ ನಂಬರ ಗೊತ್ತಿಲ್ಲ. ಪೂರ್ವಕ್ಕೆ - ಕೆ ಟಿ ಶೆಟ್ಟಿರವರ ಜಾಗ ಇದೆ, ಅದರ ಸರ್ವೆ ನಂಬರ ಕೂಡ 220 ಆಗಿರುತ್ತದೆ. ಪಶ್ಚಿಮಕ್ಕೆ - ಪಂಚಾಯತಿಯ ರಸ್ತೆ ಇದೆ. ಉತ್ತರ ಮತ್ತು ಪಶ್ಚಿಮಕ್ಕೆ 2 ಕಡೆಗಳಲ್ಲಿಯೂ ರಸ್ತೆ ಇರುತ್ತದೆ.

ನಮ್ಮ ಜಾಗದಲ್ಲಿ ಆರ್ ಸಿ ಸಿ ಕಟ್ಟಡ ಇದೆ. ಅದರಲ್ಲಿ ನಾವು ಹೊಟೇಲ್ ನಡೆಸುತ್ತಿದ್ದೇವೆ. ಹಿಂಭಾಗದ ಕಟ್ಟಡವನ್ನು ಬಾಡಿಗೆಗೆ ಕೊಟ್ಟಿರುತ್ತೇವೆ. ಬಾಡಿಗೆ ಕೊಟ್ಟಿರುವುದಕ್ಕೆ ದಾಖಲೆ ಹಾಜರುಪಡಿಸಿರುವುದಿಲ್ಲ. ಬಾಡಿಗೆಗೆ ಸುಮಾರು 20 ವರ್ಷಗಳಿಂದ ನೀಡಿರುತ್ತೇವೆ. ಕುಂದಾಪುರ – ಶಿವಮೊಗ್ಗ ರಾಜ್ಯ ಹೆದ್ದಾರಿ ಯಾವಾಗ ಆಗಿದೆ ಎಂದು ಗೊತ್ತಿಲ್ಲ. ಕರಾವಳಿ ಭಾಗದಲ್ಲಿ ದೊಡ್ಡ ವಾಹನಗಳು ಇದೇ ಮುಖ್ಯ ರಸ್ತೆಯಲ್ಲಿ ಸಂಚರಿಸುತ್ತವೆ ಎಂದರೆ ಸರಿ. ಶಿವಮೊಗ್ಗ - ಕುಂದಾಪುರ ರಾಜ್ಯ ಹೆದ್ದಾರಿ ಮೊದಲು ಸಿಂಗಲ್ ರಸ್ತೆ ಇತ್ತು, ಈಗ ಡಬಲ್ ರಸ್ತೆ ಮಾಡಿದ್ದಾರೆ. ಆ ಜಾಗದಲ್ಲಿ ಒಂದು ಸರ್ಕಲ್ ಮಾಡಿ ರಸ್ತೆ ಅಗಲೀಕರಣ ಮಾಡಬೇಕೆಂದು ಇದೆ ಎಂದರೆ ಸಾಕ್ಷಿ ಮತ್ತೊಂದು ಜಾಗದಲ್ಲಿ ಸರ್ಕಲ್ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಪಶ್ಚಿಮಕ್ಕೆ ಇರುವ

ರಸ್ತೆ ರಾಜ್ಯ ಹೆದ್ದಾರಿಯಿಂದ ಬಾಳೆಬೇರು ಎಂಬ ಊರಿಗೆ ಹೋಗುತ್ತದೆ. ನಮ್ಮ ಜಾಗದಿಂದ ಉತ್ತರಕ್ಕೆ ರಸ್ತೆಯ ನಡುವೆ ಖಾಲಿ ಜಾಗ ಇರುತ್ತದೆ.

ನಮ್ಮ ಹೊಟೇಲಗೆ ಹೋಗಲು 2 ಕಡೆಯಿಂದ ರಸ್ತೆ ಇರುತ್ತದೆ. ಕಟ್ಟಡ ಕಟ್ಟಲು ಪಂಚಾಯತಿಯಿಂದ ಪರವಾನಿಗೆ ಪಡೆದಿರುತ್ತೇವೆ, ಆ ಪರವಾನಿಗೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ವಿಭಾಗ ಪತ್ರವನ್ನು ಕೂಡ ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಮೇಲೆ ಹೇಳಿದ ಚೆಕ್ಕುಬಂದಿಯನ್ನು ವಾದ ಪತ್ರದಲ್ಲಿ ನಮೂದಿಸಿಲ್ಲ. 2 ನೇ ವಾದಿ ನನ್ನ ತಂಗಿ, 3 ನೇ ವಾದಿ ನನ್ನ ತಮ್ಮ. 4 ನೇ ವಾದಿ ನಮ್ಮ ಕಟ್ಟಡದಲ್ಲಿನ ಬಾಡಿಗೆದಾರ. 2 ನೇ ವಾದಿಯ ಸ್ವತ್ತಿನ ಸರ್ವೆ ನಂಬರ 220, ಸಬ್ ನಂಬರ ಗೊತ್ತಿಲ್ಲ. 2 ನೇ ವಾದಿಯ ಸ್ವತ್ತಿನ ವಿಸ್ತೀರ್ಣ ಒಂದು 12 ಸೆಂಟ್ಸ ಮತ್ತೊಂದು 4¼ ಸೆಂಟ್ಸ, 2 ನೇ ವಾದಿಯ ಸ್ವತ್ತಿನ ಚೆಕ್ಕು ಬಂದಿ ಪಶ್ಚಿಮಕ್ಕೆ - ನನ್ನದೇ ಜಾಗ, ದಕ್ಷಿಣಕ್ಕೆ - ಪ್ರಭಾವತಿರವರ ಖಾಲಿ ಜಾಗ, 2 ನೇ ವಾದಿಯು ಕೂಡ ತಮ್ಮ ಕಟ್ಟಡವನ್ನು ಬಾಡಿಗೆಗೆ ಕೊಟ್ಟಿರುತ್ತಾರೆ. ನಮ್ಮ ಸ್ವತ್ತುಗಳಿಗೆ ಸಂಬಂಧಿಸಿದ ಪೋಟೋಗಳನ್ನು ಹಾಜರುಪಡಿಸಿಲ್ಲ. ಭಾವಚಿತ್ರಗಳನ್ನು ಹಾಜರುಪಡಿಸಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3 ನೇ ವಾದಿಯ ಸ್ವತ್ತಿನ ಸರ್ವೆ ನಂಬರ 220/17 ಆಗಿದ್ದು, ಅದರ ಚೆಕ್ಕು ಬಂದಿ ಪೂರ್ವಕ್ಕೆ ಸದಾಶಿವರವರ ಜಾಗ, ಪಶ್ಚಿಮಕ್ಕೆ 2 ನೇ ವಾದಿಯ ಕಟ್ಟಡ ಮತ್ತು ಜಾಗ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ವಿಶ್ವನಾಥರವರ ಖಾಲಿ ಜಾಗ. 4 ನೇ ವಾದಿಯ ಸ್ವತ್ತಿನ ಸರ್ವೆ ನಂ.220/1 ಬಿ6 ಪಿ1, 6 ಸೆಂಟ್ಸ. ಅದರ ಚೆಕ್ಕು ಬಂದಿ ಪೂರ್ವಕ್ಕೆ ರಾಧಾಕೃಷ್ಣರವರ ಬಟ್ಟೆ ಅಂಗಡಿ ಇದೆ, ಪಶ್ಚಿಮಕ್ಕೆ 3 ನೇ ವಾದಿಯ ಕಟ್ಟಡ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಮಂಜುನಾಥರವರ ಖಾಲಿ ಜಾಗ.

ಸರ್ವೆ ನಂ.220 ರ ಜಾಗ ನನ್ನ ತಾಯಿಗೆ ವೀಲುನಾಮೆಯ ಮೂಲಕ ಬಂದಿರುತ್ತದೆ. ಆ ವೀಲುನಾಮೆ ಯಾವಾಗ ಆಯಿತು ಎಂದು ಗೊತ್ತಿಲ್ಲ. ನಮ್ಮ ಜಾಗದಲ್ಲಿರುವ ಹೊಟೇಲನ್ನು ನಮ್ಮ ತಂದೆ ಕಟ್ಟಿರುತ್ತಾರೆ. ವಿಭಾಗ ಪತ್ರ ಆಗಿ ಸುಮಾರು 5-6 ವರ್ಷವಾಗಿರುತ್ತದೆ. ವೀಲುನಾಮೆ ಮತ್ತು ವಿಭಾಗ ಪತ್ರವನ್ನು ಹಾಜರುಪಡಿಸಿಲ್ಲ. ವಾದಪತ್ರದಲ್ಲಿ ದಾವಾ ಸ್ವತ್ತುಗಳ ಚೆಕ್ಕುಬಂದಿ ನಮೂದಿಸಿಲ್ಲ ಎಂದರೆ ನೆನಪಿಲ್ಲ. ಉದ್ದೇಶಪೂರ್ವಕವಾಗಿ ವಾದಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.218 ರಲ್ಲಿ ರಸ್ತೆ ಇದೆ. ನಾವು ದಾವಾ ಸ್ವತ್ತುಗಳ ಮಂಜೂರಾತಿಗಾಗಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ವಿಭಾಗ ಪತ್ರದ ಜೊತೆ ನಮೂನೆ-11 ಇ ನಕಾಶೆಯನ್ನು ಮಾಡಿಸಿರುತ್ತೇವೆ. ಆ ನಕಾಶೆಯನ್ನು ಹಾಜರುಪಡಿಸಿರುವುದಿಲ್ಲ.

ಸರ್ವೆ ನಂ.220 ಕ್ಕೆ ಸಂಬಂಧಿಸಿದಂತೆ ಪಹಣಿ ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಕುಂದಾಪುರ – ಶಿವಮೊಗ್ಗ ರಾಜ್ಯ ಹೆದ್ದಾರಿಯಲ್ಲಿನ ಸ್ವತ್ತುಗಳು ಬೆಲೆಬಾಳುವ ಸ್ವತ್ತುಗಳಾಗಿರುವುದರಿಂದ, ಆ ಸ್ವತ್ತನ್ನು ಕಬಳಿಸಲು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸರ್ಕಾರಿ ಸ್ವತ್ತನ್ನು ಕಬಳಿಸಲು 15 ಪುಟಗಳ ವಾದಪತ್ರವನ್ನು ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

4 ರಿಂದ 6 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

ಓ.ಹೇ.ಕೇ.ಸ.ಇದೆ                    ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ